**ಓ.ಎಸ್.ನಂ. 78/2017**

**ಡಿ ಡಬ್ಲ್ಯು:1**

ದಿನಾಂಕ: 06-07-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು: ಎಂ ಕೆ ಎಂ ವಾದಿ ಪರ ವಕೀಲರಿಂದ:-</u>**

ನನ್ನ ತಾತ ತಿಮ್ಮಯ್ಯನ ಮೂಲ ಕಸುಬು ವ್ಯವಸಾಯ ಎಂದರೆ ಸರಿ. ನನ್ನ ತಂದೆ ನನ್ನ ತಾತನಿಂದ ಬಂದ ಸ್ವತಿನಲ್ಲಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆ ವ್ಯವಸಾಯ ಬಿಟ್ಟು ಬೇರೆ ವೃತ್ತಿ ಮಾಡುತ್ತಿರಲಿಲ್ಲ. ನನ್ನ ತಂದೆ ತನ್ನ ತಂದೆಯಿಂದ ಬಂದ ಸ್ವತ್ತಿನಲ್ಲಿ ದುಡಿದು ಆಸ್ತಿಗಳನ್ನು ಪಡೆದುಕೊಂಡರು ಎಂದರೆ ಇರಬಹುದು. ನಿಡಿ-5 ರಲ್ಲಿ ಹಿಸ್ಸಾ ವಿಭಾಗಪತ್ರ ಎಂದು ನಮೂದು ಇದೆ ಎಂದರೆ ಸರಿ. ನಮ್ಮ ನಡುವೆ ಯಾವುದೇ ವಿಭಾಗಪತ್ರ ಆಗಿರುವುದಿಲ್ಲ. ನಮ್ಮ ಕುಟುಂಬದಲ್ಲಿ ಯಾವುದೇ ವಿಭಾಗಪತ್ರ ಆಗಿಲ್ಲ ಎಂದರೆ ಸರಿಯಲ್ಲ. ನಿಡಿ-5 ಅನ್ನು ನಾನು ಗಮನಿಸಿರುತ್ತೇನೆ. ನಿಡಿ-5 ರಲ್ಲಿ ತಪ್ಪಾಗಿ ನಮೂದಾಗಿರುವುದನ್ನು ನಾನು ಪ್ರಶ್ನಿಸಿರುವುದಿಲ್ಲ. ನಿಡಿ-5 ರಿಂದ 7 ರ ಬಗ್ಗೆ ವಾದಿಗೆ ತಿಳಿದಿರುವುದಿಲ್ಲ.

ನಿಡಿ-17 ಕ್ರಯಪತ್ರ ನಾನು ಮೈನರ್ ಆಗಿದ್ದಾಗ ನನ್ನ ತಂದೆ ಕ್ರಯಕ್ಕೆ ಖರೀದಿಸಿದ ಸ್ವತ್ತು. ಸದರಿ ಸ್ವತ್ತು ಒಟ್ಟು ಕುಟಂಬದ ಆದಾಯದಿಂದ ಖರೀದಿಸಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದಜ ಅದೇ ರೀತಿ ಔಥನಹಳ್ಳಿ ಗ್ರಾಮದ ಸ.ನಂ. 4 ಮತ್ತು ಗೊಲ್ಲರಹಳ್ಳಿಯ ಸ.ನಂ. 13 ನನ್ನ ಅಕ್ಕನಿಗೆ ನೀಡಲಾಗಿದೆ ಎಂದು ನುಡಿಯುತ್ತಾರೆ. ಸಾಕ್ಷಿ ಮತ್ತು ಮುಂದುವರೆದು ಪಾರುಕ್ ರವರಿಗೆ 50 x80 ನಿವೇಶನ ಮತ್ತು 36 x 63 ಮನೆ ಮಾರಾಟ ಆಗಿದೆ ಎಂದು ನುಡಿಯುತ್ತಾರೆ. ಸ.ನಂ. 55/2 ನನ್ನ ಹೆಸರಿನಲ್ಲಿ ಇದ್ದ ಕಾರಣ ಮತ್ತು ಅದು ಅದಲು- ಬದಲು ಆಗಿದ್ದ ಕಾರಣ ನಾನು ತಿಮ್ಮಯ್ಯರವರೊಂದಿಗೆ ದಾವೆಯಲ್ಲಿ ನಿಡಿ-27 ರಂತೆ ರಾಜಿ ಮಾಡಿಕೊಂಡಿರುತ್ತೇನೆ.

ನಿಪಿ-9 ರಲ್ಲಿ ಕಾಣುವ ಐಟಂ ನಂ, 9, 11 ಮತ್ತು 12 ಸ್ವತ್ತು ವರಗಲ ಮನೆ ತಿಮ್ಮಣ್ಣರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಐಟಂ ನಂ. 10 ಸ್ವತ್ತು ವಿಠಲಪ್ಪ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ವಿಠಲಪ್ಪ ರವರ ಮಗ ದಾವೆ ಚಾಲ್ತಿಯಲ್ಲಿರುವಾಗ ಖಾತೆ ಬದಲಾಯಿಸಿಕೊಂಡ ಬಗ್ಗೆ ನನಗೆ ತಿಳಿದಿರುವುದಿಲ್ಲ. ಐಟಂ ನಂ 9 ಮತ್ತು 12 ನ್ನು ಅನ್ನಪೂರ್ಣಮ್ಮ ರವರು ಖಾತೆ ಬದಲಾಯಿಸಿಕೊಂಡ ಬಗ್ಗೆ ನನಗೆ ತಿಳಿದಿರುವುದಿಲ್ಲ. ದಾವಾ ಸ್ವತ್ತು ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತುಗಳು ಆದರೆ ವಾದಿಗೆ ತಿಳಿಯದಂತೆ ನಾವು ಖಾತೆ ಮಾಡಿಕೊಂಡಿದ್ದೇವೆ ಎಂಬ ಪ್ರಶ್ನೆಗೆ ಸಾಕ್ಷಿಯು ವಾದಿಗೆ ಸ್ವತ್ತು ನೀಡಲಾಗಿದೆ ಆದ್ದರಿಂದ ಅವರಿಗೆ ಒಟ್ಟು ಕುಟುಂಬದ ಸ್ವತ್ತುಗಳು ನೀಡುವ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. ನಿಡಿ-5 ರಿಂದ 7 ದಾಖಲೆಗಳನ್ನು ನಾವು ಅಧಿಕಾರಿಗಳೊಂದಿಗೆ ಶಾಮಿಲಾಗಿ ಸೃಷ್ಟಿಸಿ ಕೊಂಡಿದ್ದೇವೆ ಎಂದರೆ ಸರಿಯಲ್ಲ.

**ಓ.ಎಸ್.ನಂ. 78/2017**

ವಾದಿಗೆ ತಿಳಿಸದೇ ನಾನು ಸ್ವತ್ತುಗಳ ಮೇಲೆ ಬ್ಯಾಂಕಿನಿಂದ ಸಾಲಪಡೆದಿದೇನೆ ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ಸ್ವತ್ತುಗಳ ಮೇಲೆ ನಾನು ಸಾಲ ಪಡೆಯಲು ವಾದಿಗೆ ಏಕೆ ಹೇಳಬೇಕು ಎಂದು ನುಡಿಯುತ್ತಾರೆ. ನಮ್ಮ ಹೆಸರಿಗೆ ಮಾಡಿಕೊಂಡ ದಾಖಲೆಗಳ ಬಗ್ಗೆ ವಾದಿಗೆ ತಿಳಿಸಿಲ್ಲಎಂಬ ಪ್ರಶ್ನೆಗೆ ಸಾಕ್ಷಿಯ ಅವರಿಗೆ ಬೇರೆಸ್ವತ್ತು ನೀಡಲಾಗಿದೆ ಆದ್ದರಿಂದ ತಿಳಿಸುವ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. ವಾದಿಗೂ ಸಹ ದಾವಾ ಸ್ವತಿನಲ್ಲಿ ಹಿಸ್ಸೆಯ ಹಕ್ಕು ಇದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

2 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.